ಅಧ್ಯಕ್ಷರು : ಆಯಿತು, ರೆಡ್ಡಿಯವರೇ, let us go to business ಈಗ ಸಭೆಯ ಮುಂದಿಡಲಾಗುವ ಕಾಗದ ಪತ್ರಗಳು.

(ಗೊಂದಲ)

ಶ್ರೀ ಜೆ.ವಿ. ಶ್ರೀರಾಮರೆಡ್ಡಿ : ನಿಮಗೆ ಇಷ್ಟ ಬಂದ ಹಾಗೆ ಬಜೆಟ್ ಮಂಡಿಸಿ ಬಿಡುವುದೇ ? ನಿಮಗೆ ಇಷ್ಟ ಬಂದ ಹಾಫ್ ಬಜೆಟ್ ಮಂಡಿಸುವುದಿಲ್ಲ. ಬಜೆಟ್ ಮಂಡನೆ ಮಾಡುವುದಕ್ಕೆ ಒಂದು ನಿಯಮವಿದೆ. ಆ ನಿಯಮವನ್ನು, ಸಂಪ್ರದಾಯವನ್ನು ನೀವು ಮುರಿದಿರಿ. Majority ಇದೆಯೆಂದು ಒಳ್ಳೆಯ ಸಂಪ್ರದಾಯವಿದ್ದುದನ್ನು ನೀವು ಇಲ್ಲಿ ಮುರಿಯಲಿಲ್ಲವೇ? Majority ಇದೆಯೆಂದು ನೀವು ಹೇಗೆ ಸಂಪ್ರದಾಯವನ್ನು ಮುರಿದಿರೋ ಹಾಗೆಯೇ ಅವರು ಅಲ್ಲಿ ಮುರಿದಿದ್ದಾಖುಎ.

ಶ್ರೀ ಶಿವಾನಂದ ಎಸ್.ಪಾಟೀಲ್ : ಮಾನ್ಯ ಅಧ್ಯಕ್ಷರೆ, ನಾವು ಕೊಟ್ಟ calling attention ಗೆ ನೀವು reply ಕೊಡಲಾರದೆ ಓದಿಬಿಟ್ಟಿರಿ, ನೀವೇ ಹೇಳಿ. ಅದೊಂದು ಒಳ್ಳೆಯ ಸಂಪ್ರದಾಯವೇ?

(ಗೊಂದಲ)

೪. ಸಭೆಯ ಮುಂದಿಡಲಾದ ಕಾಗದಪತ್ರಗಳು

ಅಪರ ಕಾರ್ಯದರ್ಶಿ: ವಿಧಾನ ಪರಿಷತ್ತಿನಿಂದ ತಿರಸ್ಕೃತಗೊಂಡ ಈ ಕೆಳಕಂಡ ವಿದೇಯಕಗಳನ್ನು ಸಭೆಯ ಮುಂದಿಡುತ್ತಿದ್ದೇನೆ.

೧. ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, ೨೦೦೭

೨. ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, ೨೦೦೭

೩. ಕರ್ನಾಟಕ ಮೋಟರು ವಾಹನಗಳ ತೆರಿಗೆ (ತಿದ್ದುಪಡಿ) ವಿಧೇಯಕ, ೨೦೦೭

೪. ಕರ್ನಾಟಕ ತೆರಿಗೆ ಕಾನೂನುಗಳ (ತಿದ್ದುಪಡಿ) ವಿಧೇಯಕ, ೨೦೦೭

೫. ಕರ್ನಾಟಕ ಸ್ಟಾಂಪು (ಮೂರನೇ ತಿದ್ದುಪಡಿ) ವಿಧೇಯಕ, ೨೦೦೭

೫. ಶಾಸನ ರಚನೆ

ವಿಧೇಯಕಗಳನ್ನು ಪುನರ್ ಪರ್ಯಾಲೋಚಿಸುವುದು ಹಾಗೂ ಅಂಗೀಕರಿಸುವುದು

ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕ, ೨೦೦೭ ಪುನರ್ ಪರ್ಯಾಲೋಚನಾ ಪ್ರಸ್ತಾವ

ಶ್ರೀ ಬಿ.ಎಸ್. ಯಡಿಯೂರಪ್ಪ (ಹಣಕಾಸು ಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ೨೦೦೭ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕವನ್ನುಪುನರ್ ಪರ್ಯಾಲೋಚಿಸಬೇಕೆಂದು ಕೋರುತ್ತೇನೆ.

ಪುನರ್ ಪ್ರಸ್ತಾಪವನ್ನು ಮಂಡಿಸಲಾಯಿತು

ಅಧ್ಯಕ್ಷರು : ಪ್ರಸ್ತಾಪ ಏನೆಂದರೆ ;

"೨೦೦೭ರ ಕರ್ನಾಟಕ ಧನ ವಿನಿಯೋಗ (ಲೇಖಾನುದಾನ) ವಿಧೇಯಕವನ್ನು ಪುನರ್ ಪರ್ಯಾಲೋಚಿಸುವುದು."